**ಅ.ದಾ. ಸಂ. 186/2016 DW-1**

**<u>ದಿನಾಂಕಃ 06.01.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

<u>ಪಾಟೀ ಸವಾಲು ವಾದಿ ಪರ ಶ್ರೀ. ಕೆ.ಟಿ.ಟಿ. ವಕೀಲರಿಂದಃ-</u>

1) ನನ್ನ ತಾಯಿಯ ಹೆಸರು ತಿಮ್ಮಮ್ಮ. ನನ್ನ ತಾಯಿಯವರಿಗೆ ಇಬ್ಬರು ಸಹೋದರಿಯರು. ನನ್ನ ತಾಯಿಯನ್ನು ಮದ್ದೂರಿನ ವಾಸಿಗೆ ಕೊಟ್ಟು ಮದುವೆ ಮಾಡಿರುತ್ತಾರೆ. 2022 ರಲ್ಲಿ ನನ್ನ ತಾಯಿ ಮೃತಪಟ್ಟಿರುತ್ತಾರೆ. ನನ್ನ ತಾಯಿಯ ತಂಗಿಯರು ಪುಟ್ಟಮ್ಮ ಮತ್ತು ಲಿಂಗಮ್ಮ ರವರು ಸಹಾ ಮೃತ ಪಟ್ಟಿರುತ್ತಾರೆ. ನನ್ನ ತಾಯಿಯ ಮೃತರಾಗುವವರೆಗೂ ಮದ್ದೂರಿನಲ್ಲಿ ವಾಸವಿದ್ದರು ಎಂದರೆ ಸರಿ. ಸದರಿ ಪುಟ್ಟಮ್ಮ ರವರ ಮಕ್ಕಳ ಚನ್ನಪಟ್ಟಣ ಚರ್ಚ ರಸ್ತೆಯಲ್ಲಿ ವಾಸವಾಗಿದ್ದಾರೆ ಎಂದರೆ ಸರಿ. ಲಿಂಗಮ್ಮ ರವರು ಬದುಕಿದ್ದ ಕಾಲದಲ್ಲಿ ಅವರು ಮತ್ತು ಅವರ ಮಕ್ಕಳು ಅಪ್ಪಗೆರೆ ಚನ್ನಪಟ್ಟಣ ದಲ್ಲಿ ವಾಸವಾಗಿದ್ದರು ಎಂದರೆ ಸರಿ. ಸದರಿ ಲಿಂಗಮ್ಮ ರವರು ವಾಸವಾಗಿದ್ದ ಮನೆ ಅವರ ತಂದೆ ಕರಿಯಯ್ಯ ರವರಿಗೆ ಸೇರಿದ ಸ್ವತ್ತು. ಸದರಿ ನಮ್ಮ ತಾತ ಕರಿಯಯ್ಯ ರವರ ಹೆಂಡತಿ ಹೆಸರು ಕಾಡಮ್ಮ. ನಮ್ಮ ಅಜ್ಜಿ ಕಾಡಮ್ಮ ಸುಮಾರು 30 ವರ್ಷಗಳ ಹಿಂದೆ ಮೃತಪಟ್ಟಿರುತ್ತಾರೆ. ನನಗೆ ತಿಳಿದ ಹಾಗೆ ನಮ್ಮಅಜ್ಜಿ ಕಾಡಮ್ಮ ರವರು ಮೃತರಾಗುವುದಕ್ಕೂ ಮೊದಲೇ ಹೆಣ್ಣುಮಕ್ಕಳಿಗೆ ವಿವಾಹವಾಗಿತ್ತು ಎಂದರೆ ಸರಿ. ನಮ್ಮ ತಾತ ನಮ್ಮ ಅಜ್ಜಿಗಿಂತ ಮೊದಲೇ ಮೃತಪಟ್ಟಿದ್ದರು.

2) ನಮ್ಮ ತಾಯಿ ಅವರ ತಂದೆಯ ಮರಣಾನಂತರ ಭಾಗ ನೀಡಲು ಕೇಳಿದ್ದರು. ಈ ಬಗ್ಗೆ ಯಾವುದೇ ನೋಟೀಸನ್ನು ನೀಡಿಲ್ಲ. ವಿಭಾಗ ಕೋರಿ ನನ್ನ ತಾಯಿ ಯಾವುದೇ ದಾವೆಯನ್ನು ಸಲ್ಲಿಸಿಲ್ಲ. ಅದೇ ರೀತಿ ನಮ್ಮ ಚಿಕ್ಕಮ್ಮ ಪುಟ್ಟಮ್ಮ ರವರೂ ಸಹ ಅವರ ಜೀವಿತಾವಧಿಯಲ್ಲಿ ವಿಭಾಗ ಕೋರಿ ಯಾವುದೇ ದಾವೇ ಸಲ್ಲಿಸಿಲ್ಲ. ನಮ್ಮ ತಾಯಿ ತಿಮ್ಮಮ್ಮ ಹಾಗೂ ಪುಟ್ಟಮ್ಮ ರವರ ಜೀವಿತಾವದಿಯಲ್ಲಿ ದಾವಾ ಸ್ವತ್ತಿನ ಖಾತೆ ಲಿಂಗಮ್ಮ ರವರ ಹೆಸರಿಗೆ ಆಗಿತ್ತು ಎಂದರೆ ಆ ಬಗ್ಗೆ ನನಗೆ ಗೊತ್ತಿಲ್ಲ. ಸದರಿ ಖಾತೆ ಬದಲಾವಣೆಯನ್ನು ಪ್ರಶ್ನೇ ಮಾಡಿ ನಮ್ಮ ತಾಯಿ ಅಥವಾ ನಮ್ಮ ಚಿಕ್ಕಮ್ಮ ಪುಟ್ಟಮ್ಮರವರಾಗಲೀ ಅರ್ಜಿ ಸಲ್ಲಿದ್ದಾರೆಯೋ

ಅಥವಾ ಇಲ್ಲವೋ ನನಗೆ ಗೊತ್ತಿಲ್ಲ. ಪ್ರಸ್ತುತ ದಾವೆಗೆ 1 ನೇ ಪ್ರತಿವಾದಿ ತಕರಾರು ಸಲ್ಲಿಸಿಲ್ಲ. ನಾನು ಪ್ರಸ್ತುತ ದಾವೆ ಸಲ್ಲಿಸುವುದಕ್ಕೂ ಮೊದಲು ದಾವಾ ಸ್ವತ್ತುಗಳ ಖಾತೆ ಯಾರ ಹೆಸರಿನಲ್ಲಿ ಇತ್ತು ಎಂದು ನಾನು ತಿಳಿದುಕೊಂಡಿಲ್ಲ.

3) ಪಿಡಬ್ಲೂ-1 ರವರ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿರುವ ಅಂಶಗಳನ್ನು ನಾನು ತಿಳಿದುಕೊಂಡಿರುವುದಿಲ್ಲ. ಪಿಡಬ್ಲೂ-1 ರವರು ಕರಿಯಯ್ಯ ರವರು ಮಾಡಿರುವ ವಿಲ್ ನಿಪಿ.8 ಅನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದಾರೆ ಎಂದರೆ ಆ ಬಗ್ಗೆ ನನಗೆ ಗೊತ್ತಿಲ್ಲ. ನಿಪಿ.8 ರ ಪ್ರಕಾರ 1 ನೇ ಪ್ರತಿವಾದಿರವರ ಹೆಸರಿಗೆ ತಮ್ಮ ಅಷ್ಟೂ ಆಸ್ತಿಗಳನ್ನು ವಿಲ್ ಮಾಡಿದ್ದಾರೆ ಎಂದರೆ ಗೊತ್ತಿಲ್ಲ. 1 ನೇ ಪ್ರತಿವಾದಿಯನ್ನು ನಾನು ನೋಡಿದ್ದೇನೆ. ಸದರಿಯವರು ಚಿಕ್ಕವಯಸ್ಸಿನಿಂದಲೂ ಅಪ್ಪಗೆರೆಯಲ್ಲಿಯೇ ವಾಸವಾಗಿದ್ದಾರೆ ಎಂದರೆ ಸರಿ. ನಾನು ನಮ್ಮ ತಾತ ಕರಿಯಯ್ಯ ರವರನ್ನು ನೋಡಿದ್ದೇನೆ. ನಮ್ಮ ತಾತ ಕರಿಯಯ್ಯ ಬದುಕಿದ್ದ ಕಾಲದಲ್ಲಿ 1 ನೇ ಪ್ರತಿವಾದಿ ಮತ್ತು ಅವರ ತಾಯಿ ಲಿಂಗಮ್ಮ ಜೊತೆಯಲ್ಲಿಯೇ ವಾಸವಾಗಿದ್ದರು ಎಂದರೆ ಸರಿ. ನಿಮ್ಮ ತಾತ ಮತ್ತು ಅಜ್ಜಿ 1 ನೇ ಪ್ರತಿವಾದಿ ಮತ್ತು ಅವರ ತಾಯಿ ಲಿಂಗಮ್ಮ ರವರ ಜೊತೆಯಲ್ಲಿಯೇ ವಾಸವಾಗಿದ್ದ ಕಾರಣ ಅವರ ಯೋಗಕ್ಷೇಮವನ್ನುಅ ವರೇ ನೋಡಿಕೊಳ್ಳುತ್ತಿದ್ದರು ಎಂದರೆ ಸಾಕ್ಷಿ ಎಲ್ಲರೂ ಸೇರಿ ನೋಡಿಕೊಳ್ಳುತ್ತಿದ್ದೇವು ಎಂದು ನುಡಿಯುತ್ತಾರೆ. 1 ನೇ ಪ್ರತಿವಾದಿ ನಿಮ್ಮ ತಾತನ ಯೋೀಗಕ್ಶೇಮ ಹಾಗೂ ಮನೆಯ ಅಧಿಕಾರವನ್ನು ನೊಡಿಕೊಳ್ಳುತ್ತಿದ್ದ ಕಾರಣ ನಿಪಿ.8 ರಂತೆ ಅವರ ಹೆಸರಿಗೆ ವಿಲ್ ಅನ್ನು ಬರೆದುಕೊಡಲಾಯಿತು ಎಂದರೆ ಸರಿಯಲ್ಲ. ನಿಮ್ನ ತಾತನ ಮರಣಾನಂತರ ನಿಪಿ.8 ವಿಲ್ ನ ಪ್ರಕಾರ 1 ನೇ ಪ್ರತಿವಾದಿ ಹೆಸರಿಗೆ ಖಾತೆಗಳು ಆಯಿತು ಎಂದರೆ ಸರಿಯಲ್ಲ. ಸದರಿ ಖಾತೆಗಳನ್ನು ನಮ್ಮ ತಾಯಿ ಮತ್ತು ಚಿಕ್ಕಮ್ಮ ಎಲ್ಲಿಯೂ ಸಹ ಪ್ರಶ್ನೆ ಮಾಡಿಲ್ಲ ಎಂದರೆ ಸರಿ.

4) ಸರ್ವೆ ನಂ.31/6 ಅನ್ನು ವ್ಯವಸಾಯೇತರ ಉದ್ದೇಶಕ್ಕಾಗಿ ಭೂಪರಿವರ್ತನೆ ಸಹಾ ಮಾಡಿಸಲಾಯಿತು ಎಂದರೆ ಸರಿಯಲ್ಲ. ಸದರಿ ಸರ್ವೆ ನಂ. ಅನ್ನು 22 ನಿವೇಶನಗಳನ್ನಾಗಿ ಮಾಡಿ ತಿಟ್ಟಮಾರನಹಳ್ಳಿ ಗ್ರಾಮಪಂಚಾಯಿತಿಯಲ್ಲಿ ಖಾತೆ ಸಹಾ ಮಾಡಿಸಲಾಗಿದೆ ಎಂದರೆ ಸಾಕ್ಷಿ ಈ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ಸೈಟುಗಳ ಪೈಕಿ 17

ಸೈಟುಗಳನ್ನು 6 ರಿಂದ 12 ಪ್ರತಿವಾದಿಗಳು ಹಾಗೂ ಅವರ ಸ್ನೇಹಿತರು ಖರೀದಿ ಮಾಡಿದ್ದಾರೆ ಎಂದರೆ ಆ ಬಗ್ಗೆ ನನಗೆ ಗೊತ್ತಿಲ್ಲ. ಸದರಿ ಸೈಟುಗಳನ್ನು ಉಪನ್ಯಾಸಕರು ಖರೀದಿಸಿರುವುದು ಎಂದರೆ ಸರಿಯಲ್ಲ. ಖರೀದಿ ಪತ್ರದ ಆಧಾರದ ಮೇಲೆ ಖಾತೆಗಳಾಗಿ ಅದಕ್ಕೆ ಕಂದಾಯ ಸಹ ಪಾವತಿ ಮಾಡುತ್ತಿದ್ದಾರೆ ಎಂದರೆ ಆ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

5) 6 ರಿಂದ 12 ಪ್ರತಿವಾದಿಗಳು 1 ನೇ ಪ್ರತಿವಾದಿ ಮತ್ತು 5 ನೇ ಪ್ರತಿವಾದಿ ಅವರ ಮಗಳು ವಿನುತಾರವರ ವಿರುದ್ಧ ಓ.ಎಸ್.269/2018 ರಂತೆ ದಾವೆಯನ್ನು ಸಲ್ಲಿಸಿದ್ದಾರೆ ಎಂದರೆ ಗೊತ್ತಿಲ್ಲ. 6 ರಿಂದ 12 ಪ್ರತಿವಾದಿಗಳು 1995 ರಲ್ಲೇ ನಿವೇಶನಗಳನ್ನು ಖರೀದಿಸಿದ್ದಾರೆ ಎಂದರೆ ಸರಿಯಲ್ಲ. ಖರೀದಿಸಿದ ದಿನದಿಂದಲೂ ಸದರಿಯವರೇ ಸ್ವಾಧೀನಾನುಭವದಲ್ಲಿ ಇದ್ದಾರೆ ಎಂದರೆ ಯಾರೂ ಇಲ್ಲ ಎಂದು ನುಡಿಯುತ್ತಾರೆ. 1995 ರಲ್ಲಿ ಆದಂತಹ ಕ್ರಯ ಪತ್ರವನ್ನು ಯಾರೂ ಸಹ ಪ್ರಶ್ನೇ ಮಾಡಿಲ್ಲ ಎಂದರೆ ಸರಿ. 6 ರಿಂದ 12 ಪ್ರತಿವಾದಿಗಳು ಖರೀದಿ ಮಾಡಿರುವ ನಿವೇಶನಗಳಿಗೂ ನಿಮಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಮ್ಮ ತಾಯಿ ಹಾಗೂ ಚಿಕ್ಕಮ್ಮ ಪುಟ್ಟಮ್ಮ ರವರ ಜೀವಿತಾವಧಿಯಲ್ಲಿ ವಿಭಾಗ ಕೋರದೇ ಇರುವ ಕಾರಣ ಈಗ ನೀವು ವಿಭಾಗ ಕೇಳಲು ಯಾವುದೇ ಹಕ್ಕು ಅಧಿಕಾರ ಕೇಳಲು ಯಾವುದೇ ಅಧಿಕಾರ ಇಲ್ಲ ಎಂದರೆ ಸರಿಯಲ್ಲ. ನನಗಾಗಲೀ ಅಥವಾ ಪ್ರತಿವಾದಿಗಳಿಗಾಗಲೇ ದಾವಾ ಸ್ವತ್ತಿನ ಮೇಲೆ ಅಧಿಕಾರ ಇಲ್ಲ ಎಂದರೆ ಸಾಕ್ಷಿ ಅದು ಪಿತ್ರಾರ್ಜಿತ ಆಸ್ತಿ ಆದ್ದರಿಂದ ನಮಗೆ ಹಕ್ಕು ಇದೆ ಎಂದು ನುಡಿಯುತ್ತಾರೆ.

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಣ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಹಾಗೂ ಜೆಎಂಎಫ್‌ಸಿ
ನ್ಯಾಯಾಲಯ, ಚನ್ನಪಟ್ಟಣ